ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ: ಈಗಾಗಲೇ 6 ಗಂಟೆಯಾಗಿದೆ ನಾಳೆ ಮಾತನಾಡುವುದಕ್ಕೆ ಅವಕಾಶ ಕೊಡಿ.

ಶ್ರೀ ಬಿ.ಆರ್. ಯಾವಗಲ್ (ನರಗುಂದ): ಮಾನ್ಯ ಉಪಾಧ್ಯಕ್ಷರೆ, ಈಗ ನಾನು ಭಾಷಣವನ್ನು ಪ್ರಾರಂಭ ಮಾಡುತ್ತೇನೆ, ನಾಳೆ ಮುಂದುವರೆಸುತ್ತೇನೆ.

ಉಪಾಧ್ಯಕ್ಷರು: ತಾವು ಬೇಗನೆ ಮುಗಿಸುತ್ತೀರಿ, ಈಗ ಮಾತನಾಡಿ.

ಶ್ರೀ ಬಿ.ಆರ್. ಯಾವಗಲ್: ಈಗ ನಾನು ಪ್ರಾರಂಭ ಮಾಡುತ್ತೇನೆ, ನಾಳೆ ದಿವಸ ಮುಗಿಸುತ್ತೇನೆ. ಪೂರ್ಣ ಮಾಡುವುದು ಬೇಡ.

ಉಪಾಧ್ಯಕ್ಷರು: ಮಾನ್ಯ ಯಾವಗಲ್‌ರವರೆ ನಾಳೆ ನೀವು ಭಾಷಣ ಪ್ರಾರಂಭ ಮಾಡುತ್ತೀರಾ? ಹಾಗಾದರೆ ಈಗ ಸದನವನ್ನು ನಾಳೆ ಬೆಳಿಗ್ಗೆ 11-00 ಗಂಟೆವರೆಗೆ ಮುಂದೂಡುತ್ತಿದ್ದೇನೆ.

(ಸದನವು ಸಂಜೆ 6 ಗಂಟೆ 2 ನಿಮಿಷಕ್ಕೆ ಮುಂದೂಡಲ್ಪಟ್ಟು

ಪುನಃ ದಿನಾಂಕ: 10ನೇ ಜುಲೈ 2002ರ ಬುಧವಾರದಂದು

ಬೆಳಿಗ್ಗೆ 11-00 ಗಂಟೆಗೆ ಸೇರಲು ನಿಶ್ಚಯಿಸಿತು)

10. ಅನುಬಂಧ I

ಶೇಂದಿಗೆ ಲೀಟರ್ ಫೀ ಮನ್ನಾ

(ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ಮೂಲಕ ನೀಡಲಾದ ಉತ್ತರಗಳು.

ಶೇಂದಿಗೆ ಲೀಟರ್ ಫೀ ಮನ್ನಾ

1(56) - ಶ್ರೀ ಅಭಯಚಂದ್ರ ಕೆ. (ಮೂಡಬಿದ್ರೆ) : ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸೇಂದಿ ಬಗ್ಗೆ ಲೀಟರ್ ಫೀ ಮನ್ನಾ ಮಾಡುವಂತೆ ಆದೇಶಿಸುವುದಾಗಿ ಹಿಂದಿನ ಅಧಿವೇಶನದಲ್ಲಿ ತಿಳಿಸಿರುವಿರಿ; ಆದರೆ ಈ ತನಕ ಸರ್ಕಾರ ಯಾವುದೇ ಆದೇಶ ನೀಡಿಲ್ಲ ವಿಳಂಬಕ್ಕೆ ಕಾರಣವೇನು?

ಆ) ಈ ಲೀಟರ್ ಫೀ ಅಡಚಣೆಯಿಂದಾಗಿ ಹಲವಾರು ಮೂರ್ತೆದಾರರ ಸಹಕಾರಿ ಸಂಘಗಳು ತಮ್ಮ ವ್ಯವಹಾರ ನಡೆಸಲಾಗದ ಪರಿಸ್ಥಿತಿ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೇ?

ಶ್ರೀ ಎಂ.ಎಂ. ನಾಣಯ್ಯ (ಅಬಕಾರಿ ಸಚಿವರು)

ಅ) ಈ ಬಗ್ಗೆ ಸಧ್ಯದಲ್ಲೇ ಆದೇಶ ಹೊರಡಿಸಲಾಗುವುದು.

ಅ) ಇಲ್ಲ

ಮೂಡಬಿದ್ರೆ ಪುರಸಭೆಯಲ್ಲಿರುವ ಕೊಳಚೆ ಪ್ರದೇಶಗಳು

2(57) - ಶ್ರೀ ಅಭಯಚಂದ್ರ.ಕೆ. (ಮೂಡಬಿದ್ರೆ) : ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೂಡಬಿದ್ರೆ ಪುರಸಭೆಯಲ್ಲಿರುವ ಎಷ್ಟು ಪ್ರದೇಶ ಕೊಳಚೆ ಪ್ರೇದಶವೆಂಬುದಾಗಿ ಆದೇಶಿಸಲಾಗಿದೆ?

ಆ) ಇತರ ಕೊಳಚೆ ಪ್ರದೇಶಗಳ ಸೇರ್ಪಡೆಯು ಯಾವ ಹಂತದಲ್ಲಿರುವುದು? ಅಥವಾ ಈಗಾಗಲೇ ಸೇರ್ಪಡೆಗೆ ಆದೇಶಿಸಲಾಗಿದೆಯೇ?

ಇ) ಮೂಡಬಿದ್ರೆ ಮತ್ತು ಮುಲ್ಕಿ ನಗರ ಪಂಚಾಯ್ತಿಯ ಕೊಳಚೆ ನೀರಿನ ಸಮಸ್ಯೆ ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ನಗರ ಪಂಚಾಯತ್ ಮತ್ತು ಪುರಸಭೆಯಿಂದ ಸದರಿ ಸಮಸ್ಯೆ ಪರಿಹರಿಸಲು ಅಸಾಧ್ಯವಾಗಿರುವುದರಿಂದ ಸರಕಾರ ಕೈಗೊಂಡ ಕ್ರಮಗಳಾವುವು?

ಶ್ರೀ ಎಸ್. ಕುಮಾರ ಬಂಗಾರಪ್ಪ (ಪೌರಾಡಳಿತ ರಾಜ್ಯ ಸಚಿವರು)

ಅ) 1. ಕಡ್ಡಬಿಟ್ಟು ಹರಿಜನ ಕಾಲೋನಿ 2. ನಾರಂಪಾಡಿ ಹರಿಜನ ಕಾಲೋನಿ. 3. ಕಾಯರ್‌ಗುಂಡಿ ಪ್ರದೇಶ 4. ಲಾಡಿ ಹರಿಜನ ಕಾಲೋನಿ. 5. ಅಲಂಗಾರು ಚಂದ್ರ ಕೊಪ್ಪ ಪ್ರದೇಶಗಳನ್ನು ಕೊಳಚೆ ಪ್ರದೇಶಗಳೆಂದು ಗುರುತಿಸಿದೆ.

ಆ) ಮೇಲ್ಕಂಡ ಪ್ರದೇಶಗಳಲ್ಲದೆ; 1. ಮಾರ್ಪಾಡಿ ಗ್ರಾಮದ ಮುಗೇರ ಕಾಲನಿ. 2. ಬೋವಿಕೇರಿ ಕಾಲನಿ 3. ಕೊಡಂಗಲ್ಲು ಕಾಲನಿ. 4. ಮಾಸ್ತಿಕಟ್ಟೆ ಹರಿಜನ ಕಾಲನಿ. 5. ಪಾದೆ ಮುಗೇರ ಕಾಲನಿ. ಈ ಪ್ರದೇಶಗಳನ್ನು ಕೊಳಚೆ ಪ್ರದೇಶವೆಂದು ಪರಿಗಣಿಸಲು ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಹೌದು.

ಈ) ಒಳಚರಂಡಿ ವ್ಯವಸ್ಥೆಯನ್ನು ಅನುಷ್ಠಾನಗೊಳಿಸುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ರಾಜ್ಯದಲ್ಲಿ ಮಧ್ಯಮಾರಾಟ ಪರವಾನಿಗಿ ಬಗ್ಗೆ

3(51) - ಶ್ರೀ ಅಂಗಾರ ಎಸ್ (ಸುಳ್ಯ): ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಳೆದ 3 ವರ್ಷಗಳಿಂದ ಎಷ್ಟು ಜನರಿಗೆ ಮಧ್ಯ ಮರಾಟ ಮಾಡಲು ಅನುಮತಿ ನೀಡಲಾಗಿವೆ? (ಸಿ.ಎಲ್. 1,2,4,7,9 ರ ಮಾಹಿತಿಯನ್ನು ವರ್ಷವಾರು, ಜಿಲ್ಲಾವಾರು ನೀಡುವುದು?